ತೀರಿಸುತ್ತಿದ್ದೂ.

ಅಂತೂಇಂತೂ ಊರಿನಲ್ಲಿ ಹಬ್ಬದ ಸಡಗರ ಜೋರಾಯಿತು. ಸುತ್ತ ಹತ್ತಾರು ಹಳ್ಳಿಯ ಕುಲ ಬಾಂಧವರು, ಸಂಬಂಧಿಕರು ಮನೆಗಳಿಗೆ ಬಣ್ಣ ಬಣ್ಣದ ರವಿಕೆ, ಸೀರೆ ತೊಟ್ಟು ಬಂದು ಸೇರಿಕೊಂಡ್ರು, ಈ ಹಬ್ಬ ಸುಮಾರು ಐದು ದಿನಗಳ ಕಾಲ ನಡೆಯುವ ಹಬ್ಬವಾದ್ದರಿಂದ ಊರಿನಲ್ಲಿ ಪ್ರತಿ ಮನೆಯಲ್ಲಿಯೂ ಐದು ಆರು ಬೇಟೆಗಳನ್ನು ತಂದು ಕಟ್ಟಿಕೊಂಡಿದ್ರು. ಇತ್ತ ಭೀಮಪ್ಪ ಒಂದು ತಿಂಗಳ ಕಾಲ ಮಡಿಯಿಂದ ಇದ್ದು ಚರಗದ ಬುಟ್ಟಿಯನ್ನು ಸಿದ್ಧತೆ ಮಾಡಿಕೊಂಡ. ಅಂದು ರಾತ್ರಿಯೇ ದುರ್ಗವ್ವನನ್ನು ಹೊಳೆಗೆ ಕರೆದು ಕೊಂಡು ಹೋಗಿ, ಗಂಗೆಪೂಜೆ ನೇರವೇರಿಸಿ ಮೆರವಣಿಗೆಯಲ್ಲಿ ಮೈದುಂಬಿಕೊಂಡು ಬಂದು ಊರಿನ ಕಟ್ಟೆಯ ಮೇಲೆ ಕುಳಿತ್ಲು. ಮೊದಲ ಪೂಜೆ ಲಿಂಗಾಯತರು ಮಾಡಿಕೊಂಡು ಹೋದರು. ನಂತರದ ಸರದಿ ಗೌಡ್ರು, ಗೊಂಚಿಕಾರರದು. ಪಂಚವಾದ್ಯಗಳೊಂದಿಗೆ ಬಂದು ದುರ್ಗವ್ವನಿಗೆ ಪೂಜೆ ಮಾಡಿಸಿದ್ರು. ನಂತರ ಹೊಲೆಯರ ಕೇರಿಯವರು ಪೂಜೆ ಮಾಡಿ ಬೇವಿನ ಸೀರೆಯ ಹರಕೆಯನ್ನು ತೀರಿಸಿದ್ರು. ಊರಿನ ಪ್ರತಿ ಮನೆಯವರು ಹಿಟ್ಟನ್ನು ದೇವರ ಗುಡಿಯ

